ಚುಕ್ಕೆ ರಹಿತ ದಿನಾಂಕ: 29-3-2022 215

**ಕರ್ನಾಟಕ ವಿಧಾನ ಪರಿಷತ್ತು**

**ವಿಧಾನ ಪರಿಷತ್ ಸದಸ್ಯರಾದ ಮಾನ್ಯ ಶ್ರೀ ಪಿ.ಹೆಚ್.ಪೂಜಾರ್ ಮತ್ತು ಶ್ರೀ ಹನಮಂತ ರುದ್ರಪ್ಪ ನಿರಾಣಿ ರವರುಗಳು ನಿಯಮ 72ರಡಿ ನೀಡಿರುವ ಗಮನ ಸೆಳೆಯುವ ಸೂಚನೆಯ ಬಗ್ಗೆ**

**ವಿಷಯ:**

ಬಾಗಲಕೋಟೆ ಜಿಲ್ಲೆಯ ಬಾಗಲಕೋಟೆ ತಾಲ್ಲೂಕಿನ ಹಿರೇಮೂರಮಟ್ಟಿ ಗ್ರಾಮದ ರಿ.ಸ.ನಂ.35/1 ಸೇರಿದಂತೆ ಒಟ್ಟು 32 ರಿ.ಸ ಒಳಗೊಂಡ ಸುಮಾರು 23-10 ಎಕರೆ, ಚಿಕ್ಕಮೂರಮಟ್ಟಿ ಗ್ರಾಮದ ಒಟ್ಟು ರಿ.ಸ. ನಂ.1/1ಎ ಸೇರಿದಂತೆ ಒಟ್ಟು 10 ರಿ.ಸ ಒಳಗೊಂಡ 16-11 ಎಕರೆ ಚಿಕ್ಕ/ಹಿರೇಹೊದ್ಲೂರ ಗ್ರಾಮದ ರಿ.ಸ.ನಂ.53/1+2ಎ/1 ಸೇರಿದಂತೆ ಒಟ್ಟು 9 ರಿ.ಸ. ಒಳಗೊಂಡ ಒಟ್ಟು 31-09 ಎಕರೆ ಹಾಗೂ ಇನ್ನೂ ಹಲವಾರು ಗ್ರಾಮಗಳ ಜಮೀನುಗಳು ಆಲಮಟ್ಟಿ ಜಲಾಶಯದ ಹಿನ್ನೀರಿನ ಮಟ್ಟ 509-512 ಮೀ ಅಡಿಯಲ್ಲಿ ಈಗಾಗಲೇ ಮುಳುಗಡೆಯಾಗಿದ್ದು, ಈಗ ನೀರಲ್ಲಿ ನಿಂತು 20 ವರ್ಷಗಳು ಗತಿಸಿದರೂ ಸಹ ಸದರಿ ಜಮೀನುಗಳಿಗೆ ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಳ್ಳದೆ ಈವರೆಗೆ ಪರಿಹಾರ ನೀಡಿರುವುದಿಲ್ಲ. ಸದರಿ ಜಮೀನುಗಳನ್ನು ಕಳೆದುಕೊಂಡ ರೈತರು ನಿರ್ಗತಿಕರಾಗಿದ್ದು, ಸರ್ಕಾರ ಸದರಿ ಜಮೀನುಗಳ ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಳಿಸಿ, ಭೂಮಾಲೀಕರಿಗೆ ತಕ್ಷ ಪರಿಹಾರಧನ ವಿತರಿಸಲು ಕ್ರಮಕೈಗೊಳ್ಳುವ ಬಗ್ಗೆ ಚರ್ಚಿಸಲು.

**ಹೇಳಿಕೆ:**

ಬಾಗಲಕೋಟೆ ತಾಲೂಕಿನ ಹಿರೇಮೂರಮಟ್ಟಿ ಮತ್ತು ಚಿಕ್ಕಮೂರಮಟ್ಟಿ ಗ್ರಾಮಗಳಿಗೆ ಸಂಬಂಧಿಸಿದಂತೆ ಎಫ್‌ಆರ್‌ಎಲ್ (Full Reservior Level) 509-519.6 ಮೀಟರವರೆಗೆ ಒಟ್ಟು 1501-10 ಎಕರೆ ಭೂಸ್ವಾಧೀನಪಡಿಸಿಕೊಂಡು ರೂ.91,86,288/- ಗಳ ಪರಿಹಾರ ವಿತರಿಸಲಾಗಿದೆ. ಎಫ್‌ಆರ್‌ಎಲ್ 509 - 519.6 ಮೀಟರವರೆಗೆ ಚಿಕ್ಕ/ಹಿರೇಹೊದ್ಲೂರ ಗ್ರಾಮದ 1599-19 ಎಕರೆ ಜಮೀನನ್ನು ಭೂಸ್ವಾಧೀನಪಡಿಸಿಕೊಂಡು ರೂ.4,36,00,199/- ಗಳ ಪರಿಹಾರ ವಿತರಿಸಲಾಗಿದೆ.

ಬಾಗಲಕೋಟೆ ತಾಲೂಕಿನ ಹಿರೇಮೂರಮಟ್ಟಿ ಗ್ರಾಮದ ರಿ.ಸ.ನಂ.35/1 ಸೇರಿದಂತೆ ಒಟ್ಟು 32 ರಿ.ಸ.ನಂ. ಒಳಗೊಂಡ ಸುಮಾರು 23-10 ಎಕರೆ ಮತ್ತು ಚಿಕ್ಕಮೂರಮಟ್ಟಿ ಗ್ರಾಮದ ರಿ.ಸ.ನಂ.1/1ಎ ಸೇರಿದಂತೆ ಒಟ್ಟು 10 ರಿ.ಸ.ನಂ.ರ ಒಳಗೊಂಡ ಸುಮಾರು 16 ಎಕರೆ 11 ಗುಂಟೆ ಮತ್ತು ಚಿಕ್ಕ/ಹಿರೇಹೊದ್ಲೂರ ಗ್ರಾಮದ ರಿ.ಸ.ನಂ.63/1+2ಎ/1 ಸೇರಿದಂತೆ ಒಟ್ಟು 9 ರಿ.ಸ.ನಂ.ರ ಒಳಗೊಂಡ 31-9 ಎಕರೆ ಭೂಸ್ವಾಧೀನ ಕುರಿತು ಭೂಸ್ವಾಧೀನ ಪ್ರಕರಣಗಳು 35 ವರ್ಷಗಳ ಹಳೆಯ ಪ್ರಕರಣಗಳಾಗಿದ್ದು ಭೂಸ್ವಾಧೀನಕ್ಕೆ ಸಂಬಂಧಪಟ್ಟಂತೆ ಭೂಕೋರಿಕೆ ಸಂಸ್ಥೆಯಾದ ನೀರಾವರಿ ಇಲಾಖೆಯ ಬಾಗಲಕೋಟೆ ಉಪವಿಭಾಗ ಆಲಮಟ್ಟಿ ರವರಿಂದ ಪ್ರಸ್ತಾವನೆ ಸ್ವೀಕೃತಗೊಂಡ ನಂತರ ತ್ವರಿತವಾಗಿ ನಿಯಮಾನುಸಾರ ಭೂಸ್ವಾಧೀನ ಪ್ರಕ್ರಿಯೆ ಕೈಗೊಳ್ಳಲಾಗುವುದು.

**(ಆರ್. ಅಶೋಕ್)**
ಕಂದಾಯ ಸಚಿವರು

**ಕಡತ ಸಂಖ್ಯೆ: ಆರ್.ಡಿ 08 ಎಕ್ಯೂವಿ 2022**